International Journal of Kannada Research
www.kannadajournal.com

ISSN: 2454–5813
IJKR 2017; 3(3): 33-35
© 2017 IJKR
www.kannadajournal.com
Received: 09-05-2017
Accepted: 10-06-2017

**ಪ್ರಮೀಳ.ಜಿ**
ಸಂಶೋಧನಾ ವಿದ್ಯಾರ್ಥಿನಿ, ಡಾ॥ ಡಿ.ವಿ. ಗುಂಡಪ್ಪ ಕನ್ನಡ ಅಧ್ಯಯನ ಮತ್ತು ಸಂಶೋಧನಾ ಕೇಂದ್ರ, ತುಮಕೂರು ವಿಶ್ವವಿದ್ಯಾನಿಲಯ, ತುಮಕೂರು. ಕರ್ನಾಟಕ

**ಡಾ॥ ಪಿ.ಎಂ.ಗಂಗಾಧರಯ್ಯ**
ಸಹಾಯಕ ಪ್ರಾಧ್ಯಾಪಕರು ಮತ್ತು ಮಾರ್ಗದರ್ಶಕರು. ಡಾ॥ ಡಿ.ವಿ. ಗುಂಡಪ್ಪ ಕನ್ನಡ ಅಧ್ಯಯನ ಮತ್ತು ಸಂಶೋಧನಾ ಕೇಂದ್ರ, ತುಮಕೂರು ವಿಶ್ವವಿದ್ಯಾನಿಲಯ, ತುಮಕೂರು. ಕರ್ನಾಟಕ

**Correspondence**
**ಪ್ರಮೀಳ.ಜಿ**
ಸಂಶೋಧನಾ ವಿದ್ಯಾರ್ಥಿನಿ, ಡಾ॥ ಡಿ.ವಿ. ಗುಂಡಪ್ಪ ಕನ್ನಡ ಅಧ್ಯಯನ ಮತ್ತು ಸಂಶೋಧನಾ ಕೇಂದ್ರ, ತುಮಕೂರು ವಿಶ್ವವಿದ್ಯಾನಿಲಯ, ತುಮಕೂರು. ಕರ್ನಾಟಕ

# ತುಮಕೂರು ಜಿಲ್ಲೆ ಕೃಷಿ ಜಾನಪದ ಆಚರಣೆಗಳು

**ಪ್ರಮೀಳ.ಜಿ, ಡಾ॥ ಪಿ.ಎಂ.ಗಂಗಾಧರಯ್ಯ**

**ಪೀಠಿಕೆ**

ಆರಂಭ, ಬೇಸಾಯ, ಒಕ್ಕಲುತನ, ರೈತಾಪಿ ಕಸುಬು ಹೀಗೆ ನಾನಾ ಹೆಸರುಗಳಿಂದ ಕರೆಯಲ್ಪಡುವ ಕೃಷಿ ಬದುಕು ಅದ್ಭುತ. ಸಕಲ ಜೀವರಾಶಿಗೆ ಜೀವ ತ್ರಾಣವಾಗುವ ಅನ್ನ ನೀಡುವ ಪರಮ ಪವಿತ್ರ ಕಾಯಕ. ತುಮಕೂರು ಜಿಲ್ಲೆ ಪ್ರಧಾನವಾಗಿ ಕೃಷಿ ಬದುಕನ್ನು ಅವಂಲಬಿಸಿದ ಪ್ರದೇಶ. ಗುಬ್ಬಿ, ತಿಪಟೂರು, ತುರುವೇಕೆರೆ, ಚಿಕ್ಕನಾಯಕನಹಳ್ಳಿ ಇಲ್ಲಿ ಪ್ರಧಾನವಾಗಿ ರಾಗಿ ಭತ್ತ ತೆಂಗನ್ನು ವ್ಯಾಪಾರಿ ಬೆಳೆಯಾಗಿ ಬೆಳೆಯಲಾಗುತ್ತದೆ. ವಿಶೇಷವಾಗಿ ತಿಪಟೂರನ್ನು ತೆಂಗಿನಸೀಮೆ ಎಂದೇ ಕರೆಯುವ ರೂಢಿ ಬಳಕೆಯಲ್ಲಿದೆ. ಪಾವಗಡ ಮಧುಗಿರಿ ಹಾಗೂ ಸಿರಾ ತಾಲ್ಲೂಕುಗಳಲ್ಲ ಸರಾಸರಿಯ ಮಳೆಯ ಪ್ರಮಾಣದಲ್ಲಿ ಅತಿ ಕಡಿಮೆ ಮಳೆ ಬೀಳುವ ಪ್ರದೇಶಗಳಾಗಿವೆ. ಕಡಲೆಕಾಯಿ ಇಲ್ಲಿನ ಪ್ರಮುಖ ವಾಣಿಜ್ಯ ಬೆಳೆ. ಕೊರಟಗೆರೆ ಕುಣಿಗಲ್ ತುಮಕೂರು ಈ ಭಾಗಗಳು ರಾಗಿ, ಅವರೆ, ತೆಂಗು, ರೇಷ್ಮೆ ಬೆಳೆಗಳ ಸಮ್ಮಿಶ್ರ ಪ್ರದೇಶವಾಗಿದೆ. ಒಟ್ಟು ತುಮಕೂರು ಜಿಲ್ಲೆಗೆ ಯಾವುದೇ ನದಿ ಮೂಲದ ಸೌಲಭ್ಯಗಳಿಲ್ಲ. ಕುಣಿಗಲ್, ಕಡಬ, ನೊಣವಿನಕೆರೆ, ನಿಟ್ಟೂರು, ಕಳ್ಳಂಬೆಳ್ಳ ಈ ಊರುಗಳ ಹೆಸರಿನಲ್ಲಿ ಬೃಹತ್ ಪ್ರಮಾಣದಲ್ಲಿ ಕೆರೆಗಳಿದ್ದರೂ ತುಂಬುವುದೇ ಅಪರೂಪ ಚೆನ್ನಾಗಿ ಮಳೆ ಬಂದರೆ ತುಂಬುವ ಈ ಕೆರೆಗಳು ಮಳೆಗಾಲದಲ್ಲಿ ಮಾತ್ರ ಬೆಳೆಗಳಿಗೆ ನೀರು ಕೊಡಲು ಸಾಧ್ಯವಾಗುತ್ತದೆ. ಅದರ ಹೊರತು ಇತರೆ ಯಾವುದೇ ನೀರಾವರಿ ಸೌಲಭ್ಯಗಳು ಇಲ್ಲದೆ ಮಳೆಯ ನೀರನ್ನೇ ಆಶ್ರಯಿಸಿ ಬೆಳೆಯುವ ಇಲ್ಲಿನ ರೈತರು ಉತ್ಸಾಹ ಶೀಲರು, ಶ್ರಮಿಕರು ಭೂಮಿತಾಯಿಯನ್ನು ನಂಬಿ ಬದುಕುವ ಕಾಯಕ ಶೀಲತನ ಇಲ್ಲಿನ ಅನುವಂಶೀಯ ಗುಣವಾಗಿದೆ. ಬೇಸಾಯಕ್ಕೆ ಸಂಬಂಧಿಸಿದ ಹಲವಾರು ಆಚರಣೆಗಳು ಜನಪದರಲ್ಲಿ ರೂಢಿಯಲ್ಲಿದೆ. ಜನಪದ ನಂಬಿಕೆ ಹಾಗೂ ಆಚರಣೆಯ ಹಿನ್ನೆಲೆಯಲ್ಲಿ ಬೆಳೆದು ಬಂದಿರುವ ಕೃಷಿಜಾನಪದವನ್ನು ಹೀಗೆ ಸಂಗ್ರಹಿಸಬಹುದು.

***ಹೊನ್ನಾರು***

ಮುಂಗಾರು ಮಳೆಯ ಮೊದಲ ಹನಿ ನೆಲಕ್ಕೆ ಬಿದ್ದಿತೆಂದರೆ ರೈತರಿಗೆ ಎಲ್ಲಿಲ್ಲದ ಉತ್ಸಾಹ ದಗೆ ಎದ್ದ ಭೂಮಿ ನೀರುಂಡು ಲೋಕಕ್ಕೆ ತಂಪನ್ನು ನೀಡುವುದು ಇದೇ ಸಂದರ್ಭ ಸಕಲ ಜೀವರಾಶಿಗೆ ಮೈ ಮನಗಳಿಗೆ ಮುದ ನೀಡುವ ಕಾಲ. ಮಳೆ ಬಿದ್ದ ಕೂಡಲೇ ರೈತರು ತಮ್ಮ ತಮ್ಮ ಇಷ್ಟಕ್ಕೆ ಆರು ಕಟ್ಟುವುದಿಲ್ಲ. ಊರಿನ ರೈತರೆಲ್ಲಾ ಸೇರಿ ಆ ವರ್ಷದಲ್ಲಿ ಯಾರ ಹೆಸರಿನ ಬಲ ಚೆನ್ನಾಗಿದೆ ಎಂದು ಜ್ಯೋತಿಷ್ಯ ಕೇಳಿ ಅವರು ಸ್ನಾನಮಾಡಿ ಮಡಿ ಬಟ್ಟೆ ಉಟ್ಟು ನೇಗಿಲನ್ನು ತೊಳೆದು ಆರು ಹೂಡುವ ಎತ್ತುಗಳ ಮೈ ತೊಳೆದು ನೇಗಿಲು ಕಟ್ಟುತ್ತಾನೆ. ನೇಗಿಲಿಗೆ ಬಸವಣ್ಣಗಳಿಗೆ ವಿಭೂತಿ ಕುಂಕುಮವಿಟ್ಟು ಸಗಣಿಯ ಉಂಡೆಗೆ ಗರಿಕೆಯ ಪತ್ರೆ ಇಟ್ಟು ತೆಂಗಿನಕಾಯಿ ಒಡೆದು ಊದುಬತ್ತಿ ಹಚ್ಚಿ ಪೂಜಿಸುತ್ತಾರೆ ನೆನೆಯಕ್ಕಿ ನೆಲೆಗಡಲೆಯ ಪ್ರಸಾದವನ್ನು ಹೆಡೆ ಮಾಡುತ್ತಾರೆ. ಹೊನ್ನಾರು ಹೂಡುವ ಜಾಗಕ್ಕೆ ಊರ ರೈತರು ಹಿರಿಯರು ಮಕ್ಕಳೆಲ್ಲರೂ ಬರುತ್ತಾರೆ. ದೇವರ ಹೆಸರೇಳಿ ಮೊದಲು ಮೂರು ಗೆರೆ ಹೊಡೆಯುತ್ತಾನೆ. ನಂತರ ಚರ್ಪಿನ ವಿನಿಮಯವಾಗುತ್ತದೆ ಹಿರಿಯರಿಗೆ ಎಲೆ ಅಡಿಕೆಯ ವಿನಿಮಯ ಆಗುತ್ತದೆ. ಜಯಘೋಷಯೊಂದಿಗೆ ಆರಂಭವಾಗುವ ಹೊನ್ನಾರು ಪೂಜೆ ಊರಿನ ಹಿರಿಯರಿಗೆ ಜಾತಿ ಮತ ಬೇದ ಮರೆತು ಮಾಡುವ ಸಡಗರದ ಉತ್ಸವ.

ತುಮಕೂರು ಜಿಲ್ಲೆಯಾದ್ಯಂತ ಹೊನ್ನಾರು ಸೇವೆ ಬಳಕೆಯಲ್ಲಿದೆ ಸಿರಾ, ಮಧುಗಿರಿ, ಪಾವಗಡ ಈ ಭಾಗಗಳಲ್ಲಿ ಮಡಕೆ ಪೂಜೆ ಎಂಬ ಹೆಸರಿನಲ್ಲಿ ಹೊನ್ನಾರಿನ ಉತ್ಸಾಹ ನಡೆಯುತ್ತದೆ ಕುಣಿಗಲ್, ತಿಪಟೂರು, ಗುಬ್ಬಿ, ತುರವೇಕೆರೆ, ಚಿಕ್ಕನಾಯಕನಹಳ್ಳಿ ಈ ಭಾಗಗಳಲ್ಲ ಹೊನ್ನಾರು ಎಂದೇ ಕರೆಯುತ್ತಾರೆ.

**ಬಿತ್ತನೆ ಪೂಜೆ**

ತುಮಕೂರು ಜಿಲ್ಲೆಯ ಗುಬ್ಬಿ ಕುಣಿಗಲ್, ತುರುವೇಕೆರೆ, ಚಿಕ್ಕನಾಯಕನಳ್ಳಿ, ಈ ಕೆಲ ಭಾಗದ ತಾಲ್ಲೂಕುಗಳಲ್ಲಿ ಹೆಚ್ಚಾಗಿ ರಾಗಿ, ಭತ್ತ, ಅವರೆ, ಹೆಸರು ಧಾನ್ಯಗಳನ್ನು ಹೇರಳವಾಗಿ ಬೆಳೆಯುತ್ತಾರೆ. ಮಳೆ ಬಿದ್ದು ಭೂಮಿ ಎರಡರಿಂದ ಮೂರು ಬಾರಿ ಉತ್ತು ಗೊಬ್ಬರ ಮಿಶ್ರ ಮಾಡಿ ಬೀಜ ಇಡಲು ಹದ ಮಾಡುತ್ತಾರೆ, ಯಾವುದೇ ದವಸವನ್ನು ಬಿತ್ತುವಾಗ ಅವುಗಳನ್ನು ಹೊಲಗಳಲ್ಲಿ ಬಿತ್ತುವ ಮೊದಲು ದೇವರ ಎಡೆ ಆಗಬೇಕೆಂಬ ನಿಯಮವಿದೆ. ಒಂದು ಗೊಡೆಯಲ್ಲಿ ರಾಗಿಯನ್ನು ತುಂಬಿ ಅದಕ್ಕೆ ವಿಭೂತಿ ಇಟ್ಟು ಅದರ ಮೇಲೆ ಸಗಣಿ ಉಂಡೆ ಇಟ್ಟು ಅದಕ್ಕೆ ಎರಡು ಎಸಳು ಗರಿಕೆಯನ್ನು ಸಿಕ್ಕಿಸಿ ಕಾಯಿ ಒಡೆದು ಕಡ್ಡಿ ಹಚ್ಚಿ ಪೂಜಿಸುತ್ತಾರೆ. ತುಂಬಿದ ಗೊಡೆಯ ಒಳಗಿರುವ ಬಸವಣ್ಣವನ್ನು ಹಾಗೆಯೇ ಬಿಟ್ಟು ಒಂದು ಬೊಗಸೆ ಬಿತ್ತುವ ಬೀಜವನ್ನು ತೆಗೆದುಕೊಂಡು ಬಂದು ಊರ ದೇವರ ಗುಡಿಯ ಮುಂದೆ ಹಾಕುವುದು ಇಲ್ಲಿನ ಸಂಪ್ರದಾಯವಾಗಿದೆ. ಜೊತೆಗೆ ಹೊಲದಲ್ಲಿ ಬಿತ್ತುವಾಗ ಬೀಜ ತುಂಬಿದ ಗೊಡೆಯಲ್ಲಿದ್ದ ಬಸವಣ್ಣನನ್ನು ತೆಗೆದು ಹೊಲದ ಒಂದು ಮೂಲೆಗೆ ಇಟ್ಟು ನಮಸ್ಕರಿಸಿದ ನಂತರವೇ ಹೊಲ ಬಿತ್ತುವ ಕೆಲಸ ಆರಂಭವಾಗುತ್ತದೆ.

ತುಮಕೂರು ಜಿಲ್ಲೆಯ ಮಧುಗಿರಿ ಸಿರಾ ಪಾವಗಡ ಈ ಭಾಗಗಳಲ್ಲಿ ಸಾಮಾನ್ಯವಾಗಿ ಕಡಲೇಕಾಯಿ ಪ್ರಧಾನ ಬೆಳೆ. ಇಲ್ಲಿ ಬೀಜ ಬಿತ್ತುವಾಗ ಪ್ರತಿ ಮನೆಯ ಗೃಹಬಲವಿರುವ ವ್ಯಕ್ತಿಯೇ ಮೊದಲು ಪೂಜೆ ಮಾಡಿ ಬೀಜವನ್ನು ಮೂರುಗುಡ್ಡೆ ಮಾಡಿ ಒಂದು ಭಾಗವನ್ನು ದೇವಸ್ಥಾನಕ್ಕೆ ತೆಗೆದುಕೊಂಡು ಹೋಗಿ ಅಲ್ಲಿಯೂ ಬಸವಣ್ಣನನ್ನು ಇಟ್ಟು ಎರಡನೇ ಗೊಡೆಯ ಬೀಜವನ್ನು ಇಡುತ್ತಾರೆ ಮೂರನೇ ಗುಡ್ಡೆಯ ಬೀಜವನ್ನು ಬಿತ್ತಲಾಗುತ್ತದೆ. ಹೀಗೆ ಮೊದಲು ಬೀಜ ಬಿತ್ತುವ ಮಹಿಳೆ ಪುರುಷರು ಕನಿಷ್ಟ ಮೂರು ಸಾಲನ್ನಾದರೂ ಕೂರಿಗೆಯ ಸಹಾಯದಿಂದ ಬಿತ್ತಬೇಕೆಂದು ಸಂಪ್ರದಾಯವಿದೆ.

**ಕುರಿತುಳಿಸುವುದು**

ಗುಬ್ಬಿ, ಚಿಕ್ಕನಾಯಕನಹಳ್ಳಿ, ತುರವೇಕೆರೆಗಳಲ್ಲಿ ಹೊಲವನ್ನು ಬಿತ್ತಿದ ಎರಡು ದಿನಗಳಲ್ಲಿ ಬಿತ್ತಿದ ಹೊಲಗಳಿಗೆ ಕುರಿಯನ್ನು ತುಳಿಸುವಂತ ಸಂಪ್ರದಾಯವಿದೆ. ಮಣ್ಣು ಹಗುರವಾಗಿ ಬೀಜ ಮೊಳೆಯಲು ಸಾಧ್ಯವಾಗುವುದಿಲ್ಲ ಎಂಬ ನಂಬಿಕೆ ಇಲ್ಲಿ ಪ್ರಧಾನವಾಗಿ ಕೆಲಸ ಮಾಡುತ್ತದೆ, ಇದರಿಂದ ಮಣ್ಣು ಬಿಗಿ ಬಂದು ಕಾಳು ಬೇಗ ಮೊಳೆಯಲು ಕಾರಣವಾಗುತ್ತದೆ ಕುರಿಯ ತುಳಿತದಿಂದ ಭೂಮಿ ಬಿಗಿಬಂದು ಬೀಜ ಬೇಗ ಹುಟ್ಟುತ್ತದೆಂಬ ನಂಬಿಕೆ ಜನಪರದ್ದು.

**ಹೊಲಕ್ಕೆ ಎಡೆ ಇಡುವುದು**

ಬೆಳೆದ ಹೊಲವನ್ನು ಕಂಡು ಆನಂದಿಸುವುದು ರೈತಾಪಿ ಬದುಕಿನ ಸಹಜ ಕ್ರಿಯೆ. ಗೌರಿ ಮಾರನವಮಿಗೆ ಪೈರು ಬೆಳೆದು ನಿಂತು ದುಂಡಾಗುವ ಕಾಲ ಆಗ ರೈತರು ಹೊಲಕ್ಕೆ ಎಡೆ ಇಡುವ ಆಚರಣೆಯನ್ನು ಮಾಡುತ್ತಾರೆ. ತುಮಕೂರು ಜಿಲ್ಲೆಯ ಎಲ್ಲಾ ಭಾಗಗಳಲ್ಲೂ ಈ ನಂಬಿಕೆ ಆಚರಣೆಯಲ್ಲಿದೆ. ಮನೆಯಲ್ಲಿಯೇ ತಯಾರಿಸಿದ ಶ್ಯಾವಿಗೆ ಅಥವಾ ಮೊಸರು ಅನ್ನವನ್ನು ಸಂಜೆಯ ಕಾಲದಲ್ಲಿ ಹೊಲದ ಮಧ್ಯದಲ್ಲಿ ಹಸಿರು ಚಪ್ಪರದ ಸಣ್ಣಗೂಡು ಮಾಡುತ್ತಾ ಮೂರು ಅಥವಾ ಐದು ಬೆಣಚು ಕಲ್ಲನ್ನು ಹಸಿಯ ಮಣ್ಣನ್ನು ಕಲೆಸಿ ಅದಕ್ಕೆ ಪುಟ್ಟ ಗದ್ದಿಗೆಯ ಆಕೃತಿ ಮಾಡಿ ಬೆನಕವನ್ನು ಇಟ್ಟು ಅರಿಶಿಣ ಕುಂಕುಮ ಹಾಗೂ ಬಳೆ ಬಂಗಾರ ಬಿಚ್ಚೋಲೆಯನ್ನು ಇಟ್ಟು ಅದರ ಮುಂದೆ ಮೊಸರನ್ನವನ್ನು ಎಡೆಯಾಗಿಡುತ್ತಾರೆ. ನಂತರ ಹೊಲಗಳಲ್ಲಿ ಅದೇ ಎಡೆಯನ್ನು ಎರಚುತ್ತಾರೆ ದೀಪ ರಾತ್ರಿಯೆಲ್ಲ ಹೊಲದಲ್ಲಿ ಉರಿಯುತ್ತಿರುತ್ತದೆ. ಹೀಗೆ ಎರಚಿದ ಅನ್ನಕ್ಕೆ ಬೆಳಕು ಹರಿದ ಕೂಡಲೇ ಕಾಗೆ, ಗೊರವಂಕ ಮೊದಲಾದ ಪ್ರಾಣಿಗಳು ತಿಲ್ಲಲು ಬರುತ್ತದೆ. ಆಗ ಹೊಲದಲ್ಲಿದ್ದ ಸಣ್ಣ ಸಣ್ಣ ಹುಳುಗಳೂ ಪಕ್ಷಿಗಳ ಕಣ್ಣಿಗೆ ಬಿದ್ದು ಪಕ್ಷಿಗಳು ಹೊಲದಲ್ಲಿರುವ ಹುಳುಗಳನ್ನು ಸುಲಭವಾಗಿ ತಿನ್ನಲು ಇದೊಂದು ಸರಳ ತಂತ್ರವಾಗಿಯೂ ಬಳಸಲಾಗುತ್ತದೆ. ಒಟ್ಟಾರೆ ಹುಳುವನ್ನು ಕೊಲ್ಲುವುದು ರೈತರ ಆಶಯವಿದ್ದಂತೆ ಕಾಣದೆ ಪ್ರಧಾನವಾಗಿ ಈ ಆಚರಣೆಯ ಹಿಂದೆ ಭೂದೇವಿಗೆ ಶಾಂತಿ ಮಾಡುವ ಭಕ್ತಿ ಭಾವ ಎದ್ದು ಕಾಣುತ್ತದೆ.

**ಹೊಲದ ದೇವರು**

ಹೊಲದ ದೇವರು ಮತ್ತು ಇದೇ ಮಾದರಿಯ ಮುನಿಯಪ್ಪ ಈ ಎರಡೂ ಆಚರಣೆಗಳು ತುಮಕೂರು ಜಿಲ್ಲೆಯಾದ್ಯಂತ ಕಂಡು ಬರುತ್ತದೆ. ಆದರೆ ದೇವರು ಹಾಗೂ ಮುನಿಯಪ್ಪನ ಆಚರಣೆಯಲ್ಲಿ ವ್ಯತ್ಯಾಸವನ್ನು ಕಾಣಬಹುದು. ಹೊಲದ ದೇವರು ಆಚರಣೆಯಲ್ಲಿ ಹೊಲದ ಪೈರು ಕಾಳು ಬಲಿಯುವ ಕಾಲದಲ್ಲಿ ಹೊಲದ ಮಧ್ಯ ಅಥವಾ ಬದುವಿನಲ್ಲಿ ಪುಟ್ಟ ಚಪ್ಪರ ಹಾಕಿ ಬೆನಕವನ್ನು ಇಟ್ಟು ದೀಪ ಹಚ್ಚುತ್ತಾರೆ. ಕುರಿ ಅಥವಾ ಮೇಕೆಯನ್ನು ಆ ದೇವರ ಮುಂದೆ ಕತ್ತರಿಸಿ ಅದರ ರಕ್ತವನ್ನು ಮನೆಯಿಂದಲ್ಲೇ ತಯಾರಿಸಿಕೊಂಡು ಬಂದಿರುವ ಅನ್ನಕ್ಕೆ ಬಸಿಯುತ್ತಾರೆ. ನಂತರ ಅದನ್ನು ಕಲಿಸಿ ಮೊದಲು ದೇವರ ಗದ್ದಿಗೆಯ ಮುಂದೆ ಎಡೆ ಇಟ್ಟು ನಂತರ ಹೊಲಕ್ಕೆ ಆ ರಕ್ತಮಿಶ್ರಿತ ಅನ್ನವನ್ನು ಎರಚುತ್ತಾರೆ ನಂತರ ಕತ್ತರಿಸಿದ ಪ್ರಾಣಿಯನ್ನು ಮನೆಗೆ ತಂದು ಕತ್ತರಿಸಿ ಅಡಿಗೆ ಮಾಡಿಕೊಂಡು ಊಟ ಮಾಡುತ್ತಾರೆ. ಇದರಲ್ಲಿ ನೆಂಟರು ಆಪ್ತರು ಮಾತ್ರ ಭಾಗಿಯಾಗುತ್ತಾರೆ ಇದು ಬಾಡೂಟ ಅಥವಾ ಕುಲದೂಟವಾದ ಹೊಲದೂಟವಾಗುತ್ತದೆ.

**ಮುನಿಯಪ್ಪನ ಆಚರಣೆ**

ಮುನಿಯಪ್ಪನ ಆಚರಣೆಯೂ ತುಮಕೂರು ಜಿಲ್ಲೆಯಾದ್ಯಂತ ಬಳಕೆಯಲ್ಲಿದೆ. ಮಾಂಸಾಹಾರಗಳಲ್ಲಿ ಪ್ರಾಣಿ ಬಲಿಯಾದರೆ ಸಸ್ಯಹಾರಿಗಳಲ್ಲಿ ಸಿಹಿ ಊಟದ ಬಳಕೆಯಲ್ಲಿದೆ. ಬೆಳೆ ಸಂವೃದ್ಧಿಯಾಗಿ ಬಂದಂತಹ ಸಂದರ್ಭ ಬೆಳೆಯನ್ನು ಕೊಯ್ದು ಬಣವೆ ಹಾಕುವ ಮೊದಲು ಅಥವಾ ನಂತರ ಮುನಿಯಪ್ಪನ ಆಚರಣೆ ಮಾಡುತ್ತಾರೆ.

ಸಾಮಾನ್ಯವಾಗಿ ಹೊಲದ ಯಾವುದೋ ಒಂದು ಮೂಲೆ ಅಥವಾ ಬದುವಿನ ನಡು ಅಥವಾ ಮರ ಗಿಡ ಬೆಳೆದ ಜಾಗವನ್ನು ಮುನಿಯಪ್ಪನ ಗುಡಿ ಅಥವಾ ಗದ್ದಿಗೆ ಎಂದು ಮೊದಲೇ ಗುರುತಿಸಿಕೊಂಡಿರುತ್ತಾರೆ. ಸಾಮಾನ್ಯವಾಗಿ ಇಂಥ ಕಡೆ ಹುತ್ತ ಬೆಳೆದಿರುತ್ತದೆ ಇಲ್ಲದೇ ಇರಲೂಬಹುದು ಅಂತ ಜಾಗದಲ್ಲಿ ಆಚರಣೆಯ ದಿನ ಮೊದಲು ಹಸಿರು ಚಪ್ಪರವನ್ನು ಹಾಕುತ್ತಾರೆ ಮೊದಲೇ ನೆಟ್ಟಿದ ಕರಿ ಅಥವಾ ಬೆಣಚುಕಲ್ಲು ಇದ್ದು ಅದನ್ನು ಶುದ್ಧವಾದ ನೀರಿನಿಂದ ತೊಳೆದು ಅದರ ಪಕ್ಕದಲ್ಲಿ ಮತ್ತೆ ಹಸಿರು ಹಸಿಯ ಕಲಸಿದ ಮಣ್ಣಿನಿಂದ ಸಣ್ಣ ಗದ್ದಿಗೆ ಮಾಡಿ ಅದರ ಮೇಲೆ ಮೂರು ಅಥವಾ ಐದು ಕಲ್ಲುಗಳನ್ನು ಇಟ್ಟು ಅದರ ಮುಂಧೆ ಸಗಣಿ ಉಂಡೆಯನ್ನು ಅದಕ್ಕೆ ಗರಿಕೆ ಪತ್ರೆಯನ್ನು ಇಡುತ್ತಾರೆ. ಬಳೆಬಂಗಾರ, ಬಿಚ್ಚೋಲೆ, ಅರಿಶಿಣ ಕುಂಕುಮ, ಇಟ್ಟು ಹೊಸ ಪಂಚೆ ತೊಡಿಸುತ್ತಾರೆ ನಂತರ ಕಾಯಿ ಬಡೆದು ಪೂಜಿಸುತ್ತಾರೆ ಆಮೇಲೆ ಹರಕೆಗಾಗಿ ತಂದಿರುವ ಕುರಿ ಅಥವಾ ಮೇಕೆಯನ್ನು ಆದೇವರ ಮುಂದೆ ಕತ್ತರಿಸುತ್ತಾರೆ ಹೀಗೆ ಕತ್ತರಿಸಿದ ಪ್ರಾಣಿಯನ್ನು ಮನೆಗೆ ತರುವುದಿಲ್ಲ ಅಲ್ಲಿಯೇ ಅಡಿಗೆ ಮಾಡುತ್ತಾರೆ. ಸಂಜೆ ೪–೫ ಗಂಟೆಯ ಸುಮಾರಿಗೆ ಊರಿನವರಿಗೆ ನೆಂಟರುಗಳಿಗೆಲ್ಲಾ ಅಲ್ಲಿಯೇ ಊಟದ ಏರ್ಪಾಡು ನಡೆಯುತ್ತದೆ. ಯಾವುದೇ ಕಾರಣದಿಂದ ಅಲ್ಲಿ ಉಳಿದ ಅಡುಗೆಯನ್ನು ಗ್ರಾಮದೊಳಗೆ ತರುವುದಿಲ್ಲ. ಗ್ರಾಮಸ್ಥರಿಗೆ

ಊಟ ಹಾಕುವುದಕ್ಕಿಂತ ಮೊದಲು ಎರಡನೇ ಬಾರಿ ಮುನಿಯಪ್ಪನನ್ನು ಪೂಜಿಸುತ್ತಾರೆ ವಿಶೇಷವಾಗಿ ತಯಾರಿಸಿದ ಮಾಂಸದ ಅಡುಗೆಯನ್ನು ಮುನಿಯಪ್ಪನಿಗೆ ಎಡೆ ಮಾಡಲಾಗುತ್ತದೆ. ಹೀಗೆ ಮಾಡುವುದರಿಂದ ತಮ್ಮ ಹೊಲದಲ್ಲಿ ಬೆಳೆ ಚೆನ್ನಾಗಿ ಬರುತ್ತದೆಂಬ ನಂಬಿಕೆಯೊಂದಿಗೆ ಮನೆಗೆ ಶಾಂತಿ ಸಮೃದ್ಧಿಯನ್ನು ದೇವರು ನೀಡುವನೆಂಬ ನಂಬಿಕೆ ಇದೆ ಮುನಿಯಪ್ಪನ ಆಚರಣೆ ಎಲ್ಲಾ ರೈತರಲ್ಲಿ ಇಲ್ಲ ಕೆಲವರು ಪೂರ್ವಿಕರಿಂದ ಪಾಲಿಸಿಕೊಂಡು ಬಂದುದನ್ನು ಮುದುವರಿಸುತ್ತಾರೆ.

**ಕೊಯಲುಶಾಸ್ತ್ರ ಅಥವಾ ಮೊದಲುಶಾಸ್ತ್ರ**

ವರ್ಷವಿಡೀ ಉತ್ತು ಬಿತ್ತಿ ಬೆಳೆದ ಬೆಳೆ ಕೈ ಹತ್ತುವುದು ರೈತರ ಸುಕೃತದ ಫಲ ಎಂದೇ ಭಾವಿಸಲಾಗಿದೆ. ಬೆಳೆ ಬಂದಾಗ ಅದನ್ನು ಯಾವಾಗ ಬೇಕಾದರೂ ಕತ್ತರಿಸಬಹುದಾದರೂ ಮೊದಲು ಮಾಡುವ ಶಾಸ್ತ್ರವನ್ನು ಮಾಡಲೇಬೇಕು. ತುಮಕೂರು ಜಿಲ್ಲೆಯ ಪ್ರಮುಖ ಬೆಳೆಯಾದ ರಾಗಿ, ಭತ್ತ, ಕಡಲೇಕಾಯಿ ಹಾಗೂ ಜೋಳದ ಬೆಳೆಯನ್ನು ಕಟಾವು ಮಾಡುವಾಗ ಬಂದು ಒಳ್ಳೆಯ ದಿನ ನೋಡಿ ಕೊಯ್ಯುವ ಶಾಸ್ತ್ರ ಮಾಡಿಸುತ್ತಾರೆ. ಇದನ್ನು ಮೊದಲು ಮಾಡುವುದು ಎಂದೇ ಕರೆಯಲಾಗುವುದು ಕಟಾವಿಗೆ ಬಂದ ಹೊಲಕ್ಕೆ ಹೋಗಿ ಕುಡಗೋಲುಗಳನ್ನು ಇಟ್ಟು ಬೆನಕನನ್ನು ಇಟ್ಟು ಕಾಯಿ ಒಡೆದು ಹಾಲು ತುಪ್ಪ ಎರೆಯುತ್ತಾರೆ. ನಂತರ ಒಂದೆರಡು ಅಡಿ ಉದ್ದದ ಬೆಳೆಯನ್ನು ಕೊಯ್ಯುವ ಮೂಲಕ ಆಯುಧಪೂಜೆ ನಡೆಯುತ್ತದೆ ಇದಾದ ಮೇಲೆ ಯಾವಾಗ ಬೇಕಾದರೂ ಹೊಲ ಕೊಯ್ಯಬಹುದು.

**ಕಣ ಮಾಡುವುದು**

ರೈತ ಸಮೃದ್ಧವಾಗಿ ಬೆಳೆದ ರಾಗಿ, ಭತ್ತ, ಜೋಳ, ಹುರುಳಿ ಮೊದಲಾದ ಧಾನ್ಯಗಳನ್ನು ಹುಲ್ಲಿನಿಂದ ಕಾಳುಗಳನ್ನು ಬೇರ್ಪಡಿಸುವುದು ಅಗತ್ಯ ಆದರೆ ಹಾಗೆ ಕಾಳುಗಳನ್ನು ಹೇಗೆಂದರಾಗೆ ಬೇರ್ಪಡಿಸುವುದಿಲ್ಲ. ತೆನೆಯಿಂದ ಕಾಳುಗಳನ್ನು ಬೇರ್ಪಡಿಸುವ ಕೆಲಸ ಕಣದಲ್ಲಿ ಮಾತ್ರ ಸಾಧ್ಯ ಬೆಳೆಯನ್ನು ಕೊಯಲು ಮಾಡಿದ ಸ್ಥಳದಲ್ಲಿ ಮೊದಲು ಕಳೆಯನ್ನು ಕಿತ್ತಿ ನೀರು ಹಾಕುತ್ತಾರೆ. ನಂತರ ನೀರು ಹಾಕಿ ಕೆಸರು ಮಾಡಿ ಕುರಿ ದನ ತುಳಿಸುವ ಮೂಲಕ ಕೆಸರನ್ನು ಹಾವಿ ಮಾಡುತ್ತಾರೆ. ನಂತರ ಹೊಂಗೆ ಸೊಪ್ಪಿನಿಂದ ಸಾರಿಸಿ ಒಂದುವಾರ ಒಣಗಿಸಿದರೆ ಕಣ ಸಿದ್ಧವಾಗುತ್ತದೆ. ನಂತರ ಕಣಕ್ಕೆ ಹುಲ್ಲು ಹಾಕುವ ಮುನ್ನ ಸಗಣಿ ಬಗ್ಗಡವನ್ನು ಹಾಕಿ ಸಾರಿಸುತ್ತಾರೆ ಹೀಗೆ ಸಾರಿಸುವ ಸಗಣಿಯನ್ನು ಒಂದು ಬಗ್ಗಡದ ಗುಂಡಿಗೆ ಹಾಕಿ ಕೊಳೆಸಬೇಕಾಗುತ್ತದೆ ಅಂಥ ಸಗಣಿಯಿಂದ ಸಾರಿಸಿದರೆ ನೆಲಗಟ್ಟಿಯಾಗಿರುತ್ತದೆಂದು ಭಾವಿಸಲಾಗಿದೆ ಸಗಣಿ ಹಾಕಿ ಸಾರಿಸಿ ಒಂದು ದಿನ ಬಿಟ್ಟು ನಂತರ ಹುಲ್ಲು ಹಾಕುತ್ತಾರೆ. ಅಂದರೆ ಕಣದಲ್ಲಿ ಹುಲ್ಲು ಹಾಸಿ ಗುಂಡು ಕಲ್ಲಿಗೆ ಎತ್ತುಗಳನ್ನು ಹೂಡಿ ಹುಲ್ಲಿನ ಮೇಲೆ ತಿರುಗಿಸುತ್ತಾರೆ ಇದನ್ನು ರೋಣಗಲ್ಲು ಎಂತಲೂ ಕರೆಯುತ್ತಾರೆ.

**ರಾಶಿಪೂಜೆ**

ರೈತರು ರಾಶಿ ಪೂಜೆಯನ್ನು ಮಾಡುವಾಗ ಇನ್ನಿಲ್ಲದ ಗೌರವ ತೋರಿಸುತ್ತಾರೆ. ರೈತ ಬೆಳೆದ ಬೆಳೆಯನ್ನು ಕಣದಿಂದ ಕಣಕ್ಕೆ ಸಾಗಿಸುವ ಮೊದಲು ಧಾನ್ಯದ ರಾಶಿಯನ್ನು ಸಾಂಪ್ರದಾಯಿಕವಾಗಿ ಪೂಜಿಸುವುದನ್ನು ರಾಶಿಪೂಜೆ ಎಂದು ಕರೆಯುತ್ತಾರೆ. ಒಕ್ಕಣೆ ಕೆಲಸ ಮುಗಿದ ಬಳಿಕ ಧಾನ್ಯಗಳನ್ನು ಕಣದಲ್ಲಿ ರಾಶಿ ಹಾಕುತ್ತಾರೆ ಹೊಲದ ವಾರಸುದಾರ ಮತ್ತು ಆತನ ಕುಟುಂಬ ವರ್ಗದವರೊಂದಿಗೆ ಅಕ್ಕಪಕ್ಕದ ರೈತಾಪಿ ಜನರು ಸಕ್ರಿಯವಾಗಿ ಪಾಲ್ಗೊಳ್ಳುತ್ತಾರೆ. ಪದ್ಧತಿಯಂತೆ ಬೆಳೆದ ಬೆಳೆಯಲ್ಲಿ ಬಂದಷ್ಟು ಪ್ರಕೃತಿ ಮಾತೆಗೆ ಅರ್ಪಿಸುತ್ತಾರೆ. ರಾಶಿಪೂಜೆಯನ್ನು ಊರಿನ ಗ್ರಾಮ ದೇವತೆಯ ಅರ್ಚಕರ ನೇತೃತ್ವದಲ್ಲಿ ನಡೆಸುತ್ತಾರೆ ಪ್ರಕೃತಿ ಜೊತೆಗೆ ಅರ್ಪಿಸುತ್ತಾರೆ. ಸಗಣಿಯಿಂದ ಸಾರಿಸಿ ರಂಗೋಲಿಯಿಂದ ಅಲಂಕರಿಸಿದ ಕಣದಲ್ಲಿ ರಾಗಿಯನ್ನು ದೊಡ್ಡರಾಶಿ, ದೇವರರಾಶಿ, ಬುದ್ಧಿವಂತರಾಶಿ, ಗೌರಮ್ಮನ ಗುಡ್ಡೆರಾಶಿ, ಕುಡ್ಡಿರಾಶಿ ಎಂಬುದಾಗಿ ಐದು ರಾಶಿಗಳನ್ನಾಗಿ ವಿಂಗಡಿಸಿಕೊಳ್ಳುತ್ತಾರೆ. ಅಲ್ಲದೆ ಬೇಸಾಯದಲ್ಲಿ ಉಪಯೋಗಿಸಿದ ಎಲ್ಲಾ ಕೃಷಿ ಉಪಕರಣಗಳನ್ನು ಒಂದಡೆ ಓರಣವಾಗಿ ಜೋಡಿಸಲಾಗುತ್ತದೆ. ರಾಶಿಯನ್ನು ಮಾವಿನ ಎಲೆ, ತುಂಬೆಹೂವು, ಕಣಗಲಹೂವು, ಅಣ್ಣೆಹೂವು ಇತ್ಯಾದಿಗಳಿಂದ ಶೃಂಗರಿಸುತ್ತಾರೆ ಹಾಲು ತುಪ್ಪ ಊದುಬತ್ತಿ ಕರ್ಪೂರ ಎಲೆ ಅಡಿಕೆ ಹಣ್ಣು ಇತ್ಯಾದಿ ಪೂಜಾಸಾಮಗ್ರಿಗಳನ್ನು ಬಿದಿರಿನ ಕೊಳಗದಲ್ಲಿಟ್ಟುಕೊಂಡು ರಾಶಿಯನ್ನು ಮೂರು ಬಾರಿ ಸುತ್ತುತ್ತಾರೆ. ರಾಶಿಪೂಜೆಯ ಸಂದರ್ಭದಲ್ಲಿ ಕೃಷಿ ಉಪಕರಣಗಳನ್ನು ಅವುಗಳ ನಿಜ ಹೆಸರಿನಿಂದ ಕರೆಯುವುದು ನಿಷಿದ್ದ ಊಟವನ್ನು ಕವಳವೆಂದು, ಪೊರಕೆಯನ್ನು ಬುದ್ಧಿವಂತನೆಂದು, ಬೂದಿಗೆ ವಿಭೂತಿ ಎಂದು, ರಾಶಿಗೆ ರಜ ಎಂದು, ಗುಂಡುಕಲ್ಲಿಗೆ ರಥ ಎಂದು, ಉದ್ದಿಗೆಗೆ ಕುದುರೆ ಎಂದು, ಮರೆಗೋಲಿಗೆ ಮರೆಬಸವನೆಂದು, ಕುಡುಗೋಲಿಗೆ ಆಯುಧವೆಂದು ಕರೆಯುತ್ತಾರೆ. ಎಲ್ಲರ ಊಟವಾದ ನಂತರ ರಾಶಿಯನ್ನು ಅಳೆಯುವ ಕೆಲಸ ಆರಂಭವಾಗುತ್ತದೆ. ನಂತರ ಗಾಡಿಯಲ್ಲಿ ರಾಶಿಯನ್ನು ಮನೆಗಳಿಗೆ ಸಾಗಿಸುವ ಕೆಲಸ ಅಲ್ಲಿ ಕಣಜ ಅಥವಾ ಹಗೇವು ದವಸವನ್ನು ಸಂಗ್ರಹಿಸುವ ಜಾಗದಲ್ಲಿ ಹಾಕುತ್ತಾರೆ. ಕಣವನ್ನು ಪೂರ್ತಿಗೊಳಿಸುವ ಮುನ್ನ ಇಲ್ಲಿಗೆ ದಾಸಪ್ಪ ಜೋಗಪ್ಪ ಕೆಲವೊಮ್ಮೆ ಮಡಿವಾಳ ಕ್ಷೌರಿಕರುಗಳಿಗೆ ಅಡದಿ ಎಂಬ ವರ್ಷದ ಕೂಲಿಯನ್ನು ದವಸದಲ್ಲಿ ಕೊಡುವ ಸಂಪ್ರದಾಯವೂ ಇದೆ.

**ಸಮಾರೋಪ**

ಈ ಮೇಲ್ಕಂಡ ಆಚರಣೆಯನ್ನು ತುಮಕೂರು ಜಿಲ್ಲೆಯ ಎಲ್ಲಾ ತಾಲ್ಲೂಕಿನಲ್ಲೂ ಆಯಾಯ ಸಂಪ್ರದಾಯಕ್ಕೆ ತಕ್ಕಂತೆ ಆಚರಿಸಿಕೊಂಡು ಬರುತ್ತಿದ್ದಾರೆ. ಆಧುನಿಕತೆಯ ಪ್ರಭಾವದಿಂದಾಗಿ ಎಲ್ಲಾ ರೀತಿಯ ಸಂಪ್ರದಾಯಗಳು ಕಡಿಮೆಯಾಗುತ್ತಾ ಬಂದಿವೆ ಎಂದು ಹೇಳಬಹುದು. ಕೃಷಿಯ ಜಾನಪದವು ತನ್ನದೇ ಆದ ರೀತಿಯಲ್ಲಿ ಪ್ರಭಾವ ಮತ್ತು ಪರಿಣಾಮವನ್ನು ಉಂಟುಮಾಡುತ್ತದೆ. ಈ ಒಂದು ಸಂಪ್ರದಾಯದ ಪಾಲನೆಯು ಕಾಲನಂತರದಲ್ಲಿ ನಶಿಸುವ ಸಾಧ್ಯತೆಯು ಬರಬಹುದು ಕಾಲಕಾಲಕ್ಕೆ ಮಳೆಯು ಬಂದರೆ ರೈತನು ಈ ಎಲ್ಲಾ ನಂಬಿಕೆಗಳನ್ನು ಉಳಿಸಿಕೊಳ್ಳಬಹುದೆಂದು ತಿಳಿಯಬಹುದು ಆಯಾಯ ಸಂದರ್ಭದಲ್ಲಿ ಆಚರಣೆಗಳು ನಡೆಯಬೇಕು.

**ಆಕರ ಗ್ರಂಥಗಳು**


1. ಡಾ॥ ಚಿಕ್ಕಣ್ಣ ಯಣ್ಣೆಕಟ್ಟೆ(೨೦೧೧)–ತುಮಕೂರು ಜಿಲ್ಲೆ ಜಾನಪದೀಯ ಅಧ್ಯಯನ, ತುಮಕೂರು ವಿಶ್ವವಿದ್ಯಾನಿಲಯ ತುಮಕೂರು
2. ಡಾ॥ ಚಿಕ್ಕಣ್ಣ ಯಣ್ಣೆಕಟ್ಟೆ(೨೦೧೧)–ತುಮಕೂರು ಜಿಲ್ಲೆ ಜಾನಪದೀಯ ನೆಲೆಗಳು, ತುಮಕೂರು ವಿಶ್ವವಿದ್ಯಾನಿಲಯ.ತುಮಕೂರು
3. ಡಾ॥ ವೀರೇಂದ್ರ ಶೀಲವಂತ (೨೦೦೪)–ಕೃಷಿ ಆಚರಣೆಗಳು,ಕನ್ನಡ ವಿಶ್ವವಿದ್ಯಾನಿಲಯ ಹಂಪಿ
4. ಡಾ॥ ಸ. ಚಿ ರಮೇಶ್ (೨೦೧೦)–ಕರ್ನಾಟಕದ ಜನಪದ ಆಚರಣೆಗಳು, ಕನ್ನಡ ವಿಶ್ವವಿದ್ಯಾನಿಲಯ, ಹಂಪಿ.
5. ಡಾ॥ ಎನ್ ನಂದೀಶ್ವರ (೨೦೦೮)– ಸಿರಾ ತಾಲ್ಲೂಕು ದರ್ಶನ, ಪೂರ್ಣಚಂದ್ರತೇಜಸ್ವಿ ಪ್ರಕಾಶನ ಸಿರಾ.